ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 743 /2019

ಸಿ.ಡಬ್ಲೂ಼3 ಪಿ.ಡಬ್ಲೂ಼3

ಸಾಕ್ಷಿಗೆ ದಿನಾಂಕ ಃ- 03/ 08 /2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮನೋಹರ ಕಾಂಬಳೆ |
| ತಂ/ಗಂ. ಹೆಸರು | ಲಕ್ಷ್ಮಣ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಿಂದಗಿ |

ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ

30.07.19 ರಂದು ಬೆಳಿಗ್ಗೆ 6.30 ಕ್ಕೆ ಸಿಂದಗಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮಾರುತಿ ಈತನ ಶವ ಇತ್ತು. ಆತನ ಶವವನ್ನು ಪಂಚನಾಮೆ ಮಾಡಿರುತ್ತಾರೆ. ಅಲ್ಲಿ ಒಂದು ದಾಖ್ಲೆ ತಯಾರಿಸಿ ನನ್ನ ಸಹಿ ಪಡೆದು ಪೊಟೋ ತೆಗೆದಿರುತ್ತಾರೆ. ನಂತರ ಅಲ್ಲಿಂದ ಅಪಘಾತವಾದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಪೊಲೀಸ್ ಠಾಣೆಯಲ್ಲಿ 2 ವಾಹನಗಳು ಇದ್ದವು ಒಂದು ಟಾಟಾ ಏಸ್ ಮತ್ತು ಮೋಟಾರ ಸೈಕಲ್. ನಿಂತಿದ್ದ ವಾಹನಕ್ಕೆ ಮೋಟಾರ ಸೈಕಲ್ ಅಪಘಾತ ಪಡಿಸಿದ ವಿಚಾರ ಗೊತ್ತಾಯಿತು. ಸಂಜೆ 4.30 ರಿಂದ 5.30 ರವರೆಗೆ ಜಪ್ತ ಪಂಚನಾಮೆ ಮಾಡಿರುತ್ತಾರೆ. ಎಂ ಹೆಚ್ 07 ವಿ 0595 ಅಂತಾ ಇತ್ತು. ಟಾಟಾ ಏಸ್ ನಂ.ಕೆಎ 28 ಎ 7348. ಶವ ಪಂಚನಾಮೆ ಈಗಾಗಲೆ ನಿಪಿ1 ಎಂದು ಗುರುತಿಸಿದ್ದು ಸಾಕ್ಷಿ ತನ್ನ ಸಹಿ ನಿಪಿ1 ನೋಡಿ ಗುರುತಿಸಿದ್ದ ಅದನ್ನು ನಿಪಿ1 ಬಿ ಎಂದು ಗುರತಿಸಲಾಯಿತು. ಭಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ2 ಎಂದು ಗುರುತಿಸಲಾಗಿದೆ. ಗುನ್ನಾ ಸ್ಥ,ಳದ ಪಂಚನಾಮೆ ಈಗಾಗಲೆ ನಿಪಿ3 ಗುರುತಿಸಿದ್ದು ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ3 ಬಿ ಎಂದು ಗುರುತಿಸಲಾಯಿತು. ಕಚ್ಚಾ ಹಾತನಕಾಶೆ ನೋಡಿ ಗುರುತಿಸಿದ್ದು ಈಗಾಗಲೆ ನಿಪಿ4 ಎಂದು ಗುರುತಿಸಲಾಗಿದೆ ಭಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ5 ಎಂದು ಗುರುತಿಸಲಾಗಿದೆ. ವಾಹನ ಜಪ್ತ ಪಂಚನಾಮೆ ನಿಪಿ6, ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ನಿಪಿ6 ಬಿ ಎಂದು ಗುರುತಿಸಲಾಯಿತು. ವಾಹನಗಳ 2 ಭಾವಚಿತ್ರ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ನಿಪಿ7 ಮತ್ತು 8 ಎಂದು ಗುರುತಿಸಲಾಗಿದೆ.

ಪಂಚನಾಮೆ ಕಾಲಕ್ಕೆ ನನ್ನ ಜೊತೆ ಚಾಸಾ-2 ಹಾಜರಿದ್ದರು.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>

ಚಾಸಾ-4 ನನ್ನ ಅಳಿಯ. ಮೃತ ವ್ಯಕ್ತಿ ದೂರಿನ ನನ್ನ ಸಂಬಂದಿಕ. ಚಾಸಾ-2 ನನ್ನ ಸಂಬಂದಿ. ಬೆಳಿಗ್ಗೆ 6 ಗಂಟೆಗೆ ನನ್ನನ್ನು ಕರೆದಿರುತ್ತಾರೆ. ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಪಂಚನಾಮೆ ಮೇಲೆ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆ ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 3 ಪಂಚನಾಮೆಗಳಿಗೆ 3 ಸಹಿ ಹಾಕಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಆದರೆ ಎಷ್ಟು ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸ್ಥಳದ ಚಕಬಂದಿ ಹೇಳಲು ಆಗುವುದಿಲ್ಲ. ಪೊಲೀಸ್ ಠಾಣೆಗೆ ವಾಹನ ಬಿಡಿಸಲು ಹೋಗಿರುತ್ತೇವೆ. ಪೊಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಿ ಭಾವಚಿತ್ರ ತೆಗೆದಿರುತ್ತಾರೆ.

ಚಾಸಾ-1 ಆರೋಪಿತನ ವಿರುದ್ದ ಖೊಟ್ಟಿ ದೂರು ದಾಖಲಿಸಿರುತ್ತಾಳೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು ಮೃತ ವ್ಯಕ್ತಿ ನನಗೆ ಸಂಬಂಧಿ ಆಗಿರುವ ಕಾರಣ ಖೊಟ್ಟಿ ದೂರನ್ನು ಆರೋಪಿತನ ವಿರುದ್ದ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ